(24)

ಇಲಾಖೆ / ವಿಷಯ : DEPARTMENT / SUBJECT: ಗೃಹ -

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 9/3/21

# ಶಾಸಕರ ಹೆಸರಲ್ಲಿ ನಕಲಿ ಲೆಟರ್‌ಹೆಡ್

ಬೆಂಗಳೂರು: ಶಾಸಕ ಗೂಳಿಹಟ್ಟಿ ಶೇಖರ್ ಅವರ ಹೆಸರಿನಲ್ಲಿ ನಕಲಿ ಲೆಟರ್‌ಹೆಡ್ ಬಳಸಿ, ವ್ಯಕ್ತಿಯೊಬ್ಬರನ್ನು ಕರ್ನಾಟಕ ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರನ್ನಾಗಿ ನಾಮನಿರ್ದೇಶನ ಮಾಡುವಂತೆ ಉಲ್ಲೇಖಿಸಿ ಅರಣ್ಯ ಸಚಿವರಿಗೆ ನೀಡಿರುವ ಕುರಿತು ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಗೂಳಿಹಟ್ಟಿ ಶೇಖರ್ ನೀಡಿದ ದೂರಿನ ಆಧಾರದ ಮೇಲೆ ವಿಧಾನಸೌಧ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಫೆ.13ರಂದು ಗೂಳಿಹಟ್ಟಿ ಶೇಖರ್ ಹೆಸರಿನ ಲೆಟರ್ ಹೆಡ್‌ನಲ್ಲಿ 'ಸುರೇಶ್ ಎಂಬುವರನ್ನು ರಾಜ್ಯ ಅರಣ್ಯ ಅಭಿವೃದ್ಧಿ ನಿಗಮದ ಉಪಾಧ್ಯಕ್ಷರನ್ನಾಗಿ ನಾಮ ನಿರ್ದೇಶನ ಮಾಡಬೇಕು. ಇದಕ್ಕೆ ಸಂಬಂಧಿಸಿದ ಕಡತವು ಅರಣ್ಯ ಇಲಾಖೆಯ ಸರ್ಕಾರದ ಅಪರ ಕಾರ್ಯದರ್ಶಿ ಬಳಿಯಿದ್ದು, ಕೂಡಲೇ ಅನುಮೋದಿಸಿ ಆದೇಶ ನೀಡುವಂತೆ ಕೋರುತ್ತೇನೆ ಎಂದು ಆರೋಪಿಗಳು ಉಲ್ಲೇಖಿಸಿದ್ದಾರೆ ಎಂದು ದೂರಿನಲ್ಲಿ ಶಾಸಕರು ತಿಳಿಸಿದ್ದಾರೆ.

**» ಅರಣ್ಯ ಅಭಿವೃದ್ಧಿ ನಿಗಮಕ್ಕೆ ನಾಮ ನಿರ್ದೇಶನ ಮಾಡಲು ಉಲ್ಲೇಖ**

ಅಲ್ಲದೆ, ನನ್ನ ಹೆಸರಿನಲ್ಲಿ ಅರಣ್ಯ ಸಚಿವರ ಆಪ್ತ ಸಹಾಯಕರಿಗೆ ಹಲವು ಬಾರಿ ಕರೆ ಮಾಡಿ ಈ ಕಡತ ಕ್ಲಿಯರ್ ಮಾಡುವಂತೆ ತಿಳಿಸಿದ್ದಾರೆ. ಸದರಿ ಕಡತದಲ್ಲಿ ಸಿ.ಟಿ. ರವಿ, ಸಿ.ಸಿ. ಪಾಟೀಲ್, ಸುರೇಶ್ ಅಂಗಡಿ ಹೆಸರಿನ ಶಿಫಾರಸು ಪತ್ರಗಳು ಇವೆ. ವಂಚಕರನ್ನು ಪತ್ತೆ ಹಚ್ಚಿ ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.